ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 604
2. ಸದಸ್ಯರ ಹೆಸರು : ಶ್ರೀ. ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 24-09-2020.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕೊರೋನಾ ಕಾರಣಕ್ಕೆ ಈವರೆಗೆ ಸಂಗ್ರಹವಾಗಿರುವ ನಿಧಿ (ಹಣ) ಎಷ್ಟು;	ಮುಖ್ಯಮಂತ್ರಿಗಳ ಪರಿಹಾರ ನಿಧಿ ಕೋವಿಡ್-19 ಖಾತೆಯಲ್ಲಿ ಸಂಗ್ರಹವಾಗಿರುವ ಒಟ್ಟು ಹಣ ರೂ. 307,11,52,210/- (ಮುನ್ನೂರ ಏಳು ಕೋಟಿ ಹನ್ನೊಂದು ಲಕ್ಷದ ಐವತ್ತೆರಡು ಸಾವಿರದ ಇನ್ನೂರ ಹತ್ತು) ರೂಪಾಯಿಗಳಾಗಿರುತ್ತವೆ.
ಆ	ಸಂಗ್ರಹವಾದ ಹಣವನ್ನು ಯಾವ ಯಾವ ಇಲಾಖೆಗಳಿಗೆ ಹಾಗು ಎಷ್ಟು; ಎಷ್ಟು ಹಣವನ್ನು ಬಳಸಲಾಗಿದೆ; (ವಿವರ ನೀಡುವುದು)	ಸಂಗ್ರಹವಾದ ಹಣದಲ್ಲಿ ಇದುವರೆವಿಗೂ ಒಟ್ಟು ರೂ. 170,21,80,000/- (ನೂರ ಎಪ್ಪತ್ತು ಕೋಟಿ ಇಪ್ಪತ್ತೊಂದು ಲಕ್ಷದ ಎಂಬತ್ತು ಸಾವಿರ) ರೂಪಾಯಿಗಳನ್ನು ಈ ಕೆಳಕಂಡ ಇಲಾಖೆಗಳಿಗೆ ಬಿಡುಗಡೆ ಮಾಡಿದೆ:

ಕ್ರ.ಸಂ.	ಇಲಾಖೆ	ಅನುದಾನ (ರೂ.ಗಳಲ್ಲಿ)
1	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	**109,85,00,000/-**
2	ವೈದ್ಯಕೀಯ ಶಿಕ್ಷಣ ಇಲಾಖೆ	**51,25,80,000/-**
3	ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)	**9,11,00,000/-**
	ಒಟ್ಟು	**170,21,80,000/-**

ಕ್ರ.ಸಂ.	ಪ್ರಶ್ನೆ	ಉತ್ತರ
ಇ	ಪಿ.ಎಂ.ಕೇರ್ ಫಂಡ್ (ಕೇಂದ್ರ) ದಿಂದ ಕೊರೋನ ನಿರ್ವಹಣೆಗೆ ರಾಜ್ಯಕ್ಕೆ ಎಷ್ಟು ಹಣ ಬಂದಿದೆ;	ಪಿ.ಎಂ.ಕೇರ್ ಫಂಡ್ (ಕೇಂದ್ರ) ದಿಂದ ಕೊರೋನ ನಿರ್ವಹಣೆಗೆ ರಾಜ್ಯ ಸರ್ಕಾರಕ್ಕೆ ಯಾವುದೇ ಅನುದಾನ ಬಂದಿರುವುದಿಲ್ಲ.
ಈ	ಬಂದಿದ್ದಲ್ಲಿ ಆ ಹಣದ ಉಪಯೋಗದ ವಿವರ ನೀಡುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ: ಆಇ 49 ಬಿಜಿಎಲ್ 2020

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ